

ಸಿಯೋಲ್‌ನಲ್ಲಿನ ಒಂದು ಕೈಗಾರಿಕಾ ವಲಯ

ವೇಗವಾಗಿ ಬಸ್ಸು ಕಾರುಗಳನ್ನು ಓಡಾಡಿಸಿದ್ದನ್ನು ಅನುಭವಿಸಿದೆವು.

ಸಮುದ್ರದ ತಟದಲ್ಲಿಯೇ ದೇಶವಿರುವ ಕಾರಣ ಮತ್ತು ವ್ಯವಸಾಯ ಮಾಡಲು ನೆಲವಿಲ್ಲದ ಕಾರಣ ಮೀನುಗಾರಿಕೆ ಇವರ ದೊಡ್ಡ ಉದ್ಯಮ. ನಗರದ ನಡುವೆ ಅತಿ ದೊಡ್ಡ ಮೀನು ಮಾರುಕಟ್ಟೆಗಳಿವೆ. ಜೀವಂತ ಮೀನು, ಆಮೆ, ಮೃದ್ವಂಗಿಗಳೇ ತುಂಬಿರುವ ಸಾಲು ಸಾಲು ಅಂಗಡಿಗಳು ಕಂಡುಬರುತ್ತವೆ. ಅವುಗಳನ್ನು ಖರೀದಿಸಿ ಮೇಲಿನ ರೆಸ್ಟೋರೆಂಟಿಗೆ ಒಯ್ದರೆ ಅವರು ಅಲ್ಲಿಯೇ ನಿಮಗದರ ಖಾದ್ಯ ಮಾಡಿ ಬಡಿಸುತ್ತಾರೆ.

ಒಣಗಿದ ಮೀನು, ಆಕ್ಟೋಪಸ್ ಇನ್ನಿತರ ಜಲಚರಗಳನ್ನು ರಸ್ತೆ ಬದಿಯ ಗಾಡಿಗಳಲ್ಲಿ ಹೇರಳವಾಗಿ ಮಾರುತ್ತಾರೆ. ನಾವು ಬೆಳಗಿನ ತಿಂಡಿಗೆ ಚಿತ್ರಾನ್ನ, ವಾಂಗೀಬಾತ್ ತಿನ್ನುವಂತೆ ಇವರು ಕೂಡ ಬೆಳಗಿನ ಉಪಾಹಾರಕ್ಕೆ ಅನ್ನದ ಖಾದ್ಯಗಳನ್ನು ತಿನ್ನಬಲ್ಲರು. ನೂಡಲ್ಸ್ ಕೂಡ ಜನಪ್ರಿಯ. ಆದರೆ ಮಾಂಸಾಹಾರವೇ ಅತಿಮುಖ್ಯ ಆಹಾರಪದ್ಧತಿ. ಬೀಫ್ ಬಾರ್ಬಿಕ್ಯೂ ಕೂಡ ಬಹಳ ಪ್ರಸಿದ್ಧ.



ದಕ್ಷಿಣ ಕೊರಿಯಾದ ಹೊಸ ತಲೆಮಾರುಗಳಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿ ಹೇರಳವಾಗಿ ಮಿಳಿತವಾಗಿದೆ. ಉಡುಗೆ ತೊಡುಗೆ, ಆಹಾರ, ನಡವಳಿಕೆ, ಸಂಗೀತ, ನೃತ್ಯ ಮತ್ತು ವೇಗದ ಸಂಬಂಧಗಳು ಎಲ್ಲವೂ ಇವೆ. ಪುಟ್ಟ ದೇಶದಲ್ಲಿ ನಿಯತ್ತಿನಿಂದ ಎಷ್ಟು ದುಡಿದರೂ ಸಾಲದೆನ್ನುವ ಭಾವ ಈ ತಲೆಮಾರುಗಳಲ್ಲಿದೆ. ಬಹುತೇಕರು ಇತರೆ ದೇಶಗಳಿಗೆ ವಲಸೆ ಹೋಗುವ ಕನಸನ್ನು ಹೊತ್ತವರಾಗಿದ್ದಾರೆ.

ಹಳೆಯ ತಲೆಮಾರುಗಳಲ್ಲಿ ಮತ್ತು ಹಳೆಯ ನಗರದ ಭಾಗಗಳಲ್ಲಿ ಹಿಂದಿನ ಸಂಪ್ರದಾಯಗಳು ನೋಡಸಿಗುತ್ತವೆ. ಉದಾಹರಣೆಗೆ, ತಲೆಯ ಮೇಲೆ ಹೊರೆ ಹೊತ್ತು ಸಾಗುವ, ನಡುಬಗ್ಗಿದ, ಹಲ್ಲಿಲ್ಲದ ಮುದುಕರು ಕಾಣಸಿಗುತ್ತಾರೆ. ರಸ್ತೆಯ ಮಧ್ಯೆ ಕುಳಿತು ಮಡಕೆ ಕುಡಿಕೆಗಳಲ್ಲಿ ಆಹಾರ ಬೇಯಿಸುತ್ತ ಎದುರಿನ ತಗ್ಗಾದ ಕೂರುವ ಮಣೆಗಳ ಮೇಲೆ ಕುಳಿತು ತಿನ್ನುವ ಗ್ರಾಹಕರಿಗೆ ಬಿಸಿ ಊಟ ಬಡಿಸುವ ಸಾಲು ಸಾಲು ಹೆಂಗಸರು ಕಾಣಸಿಗುತ್ತಾರೆ. ಈ ತಲೆಮಾರಿನವರಲ್ಲಿ ಕೌಟುಂಬಿಕ ಮೌಲ್ಯಗಳು ಹೇರಳವಾಗಿ ಕಂಡುಬರುತ್ತವೆ.

ಕೆಮಿಕಲ್ಸ್, ಸ್ಟೀಲ್ ಉತ್ಪಾದನೆ ಮತ್ತು ಹಡಗು ಕಟ್ಟುವುದರಲ್ಲಿಯು ಇವರು ನಿಸ್ಸೀಮರು. ಇಷ್ಟೆಲ್ಲ ಕೊಡುಗೆ ನೀಡಿದ್ದರೂ ದಕ್ಷಿಣ ಕೊರಿಯಾ ತನ್ನ ಸೌಂದರ್ಯವರ್ಧಕ ಉತ್ಪನ್ನಗಳಿಗೆ ಅತ್ಯಂತ ಪ್ರಸಿದ್ಧ ಸ್ಥಳವಾಗಿದೆ.

ಇಲ್ಲಿನ ಆಸ್ಪತ್ರೆಗಳು ಸೌಂದರ್ಯವರ್ಧಕ ಶಸ್ತ್ರ ಚಿಕಿತ್ಸೆಗಳನ್ನು ನೀಡುವಲ್ಲಿ ಮುಂಚೂಣಿಯಲ್ಲಿವೆ. ಅದು ಕೂದಲಿಲ್ಲದವರಿಗೆ ಹೇರ್ ಟ್ರಾನ್ಸ್‌ಪ್ಲಾಂಟ್ ಮಾಡುವುದಿರಲಿ ಅಥವಾ ಮುಖದ ಪ್ಲಾಸ್ಟಿಕ್ ಸರ್ಜರಿಯೇ ಇರಲಿ ಪ್ರಪಂಚದ ಹಲವೆಡೆಗಳಿಂದ ಜನರು ಇಲ್ಲಿಗೆ ಬರುತ್ತಾರೆ. ಇಂತಹುದೇ ಚಟುವಟಿಕೆ ನಡೆಸುವ ಬೇರೆ ಹಲವು ದೇಶಗಳಿಗೆ ಹೋಲಿಸಿದರೆ ಕೊರಿಯನ್ನರ ಕೈಚಳಕದ ಬಗ್ಗೆ ಜನರಲ್ಲಿ ವಿಶ್ವಾಸವಿದೆ. ಮೋಸ ಮಾಡುವುದಿಲ್ಲ ಎಂಬ ನಂಬುಗೆಯಿದೆ.

ಈ ದೇಶದಲ್ಲಿಯೂ ಭ್ರಷ್ಟಾಚಾರ, ವಶೀಲಿ, ಮನೆತನ, ಡಂಭಾಚಾರ, ವಾಮಾಚಾರ ಎಲ್ಲವೂ ಇವೆ. ಆದರೆ, ಅವುಗಳಿಗೆ ಒಂದು ಮಿತಿಯಿದೆ. ಬೃಹತ್ ಭೂ ಪ್ರದೇಶ ಮತ್ತು ಆರ್ಥಿಕತೆ ಹೊಂದಿರುವ ಭಾರತ ದಕ್ಷಿಣ ಕೊರಿಯಾದಷ್ಟು ಮುಂದುವರೆದಿಲ್ಲ. ದಕ್ಷಿಣ ಕೊರಿಯಾ ದೇಶ 'ಮುಂದುವರೆದ' ದೇಶಗಳ ಪಟ್ಟಿಯಲ್ಲಿದೆ. ಅಲ್ಲಿಯ ಪ್ರಜೆಗಳ ಬದುಕಿನ ದರ್ಜೆ ನಮಗಿಂತ ಉತ್ತಮವಾಗಿದೆ. 2023ರ ಸರ್ವೇ ಪ್ರಕಾರ ಪ್ರಜೆಯೊಬ್ಬನ ವಾರ್ಷಿಕ ಆದಾಯ 32400 ಅಮೆರಿಕನ್ ಡಾಲರ್ ಆದರೆ, ಭಾರತದವರ ಆದಾಯ $2400 ಮಾತ್ರವಾಗಿತ್ತು. ಭಾರತಕ್ಕೆ ಹೋಲಿಸಿದಾಗ ಅತಿ ಪುಟ್ಟ ದೇಶವಾದರೂ ಅಲ್ಲಿನ ಪ್ರಜೆಗಳ ಜೀವನದ ಗುಣಮಟ್ಟ ಹೆಚ್ಚು ಉತ್ತಮವಾಗಿದೆ ಎನ್ನಲಾಗಿದೆ.

ಅಸ್ತಿತ್ವಕ್ಕೆ ಬಂದ ಕೇವಲ 75 ವರ್ಷಗಳಲ್ಲಿ ದಕ್ಷಿಣ ಕೊರಿಯನ್ನರು ತಮ್ಮ ದೇಶವನ್ನು ಮುಂದುವರೆದ ದೇಶಗಳ ಪಟ್ಟಿಗೆ ಸೇರಿಸಿದ್ದಾರೆ. ಅದೊಂದು ನಿಯತ್ತಿನ, ಶ್ರಮದ, ದೇಶಭಕ್ತಿಯ ಮತ್ತು ಆತ್ಮಗೌರವಗಳ ಒಟ್ಟು ಸಮ್ಮಿಶ್ರಣದ ಫಲವೆನ್ನಬಹುದು. ಅದರ ಹಿಂದಿನ ತ್ಯಾಗ, ಹೋರಾಟ ಮತ್ತು ಅವಿರತ ಶ್ರಮಗಳನ್ನು ಅಲ್ಲಿನವರ ಜೀವನಶೈಲಿಯಲ್ಲಿ ನೋಡಬಹುದು.

ದಕ್ಷಿಣ ಕೊರಿಯಾದ ವಿಮಾನ ಪ್ರಯಾಣದಲ್ಲಿ 'ಐ ಹೇಟ್ ಕೊರಿಯಾ' ಎನ್ನುವ ಸಿನಿಮಾ ನೋಡಿದೆ. ಹೊಸ ತಲೆಮಾರುಗಳು ದಕ್ಷಿಣ ಕೊರಿಯಾ ದೇಶದಿಂದ ವಲಸೆ ಹೊರಟು, ಬೇರೆ ದೇಶಗಳಲ್ಲಿ ತಮ್ಮ ಬದುಕು ಕಟ್ಟಿಕೊಳ್ಳಲು ಹೊರಡುವ, ಆ ಮೂಲಕ ತಮ್ಮ ದೇಶದ ಬಗ್ಗೆ ಹೆಚ್ಚು ಅರಿತುಕೊಳ್ಳುವ ತಿರುಳಿರುವ ಸಿನಿಮಾ ಅದು. ಇದು ಎಲ್ಲ ದೇಶಗಳ ಯುವಜನತೆಯ ದ್ವಂದ್ವಗಳನ್ನು ಕಟ್ಟಿಕೊಡುತ್ತದೆ. ಮೊದಲೇ ಹೇಳಿದಂತೆ ದಕ್ಷಿಣ ಕೊರಿಯಾದ ಸಿನಿಮಾ, ಒಟಿಟಿ ಸರಣಿಗಳು ಪ್ರಪಂಚದಾದ್ಯಂತ ಅತ್ಯಂತ ಜನಪ್ರಿಯ.

ತಮ್ಮ ದೇಶ, ಸಂಪ್ರದಾಯಗಳು ಮತ್ತು ಸಂಬಂಧಗಳ ಗೋಜಲುಗಳ ಬಗ್ಗೆ ಅತ್ಯಂತ ಸಂಕೀರ್ಣವಾದ ಮತ್ತು ಮನರಂಜನಾತ್ಮಕ ನಿರ್ಮಾಣಗಳನ್ನು ದಕ್ಷಿಣ ಕೊರಿಯಾ ಜಗತ್ತಿಗೆ ನೀಡಿದೆ. ಅವುಗಳಲ್ಲಿ ಕಾಣಸಿಗುವ ಹಲವು ವಿಮರ್ಶಾತ್ಮಕ, ಸೃಜನಾತ್ಮಕ, ಕಲಾತ್ಮಕ, ಸ್ಪರ್ಧಾತ್ಮಕ ಮತ್ತು ಒಪ್ಪಂದಾತ್ಮಕ ಒಳನೋಟಗಳಿಂದಲೇ ದಕ್ಷಿಣ ಕೊರಿಯಾ ಇಷ್ಟು ಅಭಿವೃದ್ಧಿ ಹೊಂದಿದೆ ಎಂದರೆ ತಪ್ಪಾಗಲಾರದು.